ಒ.ಎಸ್.- 64/2025
ಪಿ.ಡಬ್ಲ್ಯು- 02

ದಿನಾಂಕ 03-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ವಾದಿಯರ ಪರ ವಕೀಲರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ನಾನು ಈಗ ದಿಃ 23-10-1990 ರ ನೊಂದಾಯಿತ ವಿಲ್ ನಾಮೆಯನ್ನು ನೋಡುತ್ತಿದ್ದು ಅದನ್ನು ನೋಡಿ ಗುರುತಿಸುತ್ತೇನೆ. ಸದರಿ ವಿಲ್ ನಾಮೆಯನ್ನು ನಿಪಿ 8 ಎಂದು ಗುರುತಿಸಲಾಯಿತು. ಅದರಲ್ಲಿ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದು, ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿದಾರರ ಸಹಿಯನ್ನು ನಿಪಿ -8 (ಎ) ಎಂದು ಗುರುತಿಸಲಾಯಿತು. ನನ್ನ ಜೊತೆ ಹಾಗೂ ನನ್ನ ಸಮಕ್ಷಮ ಶಿವ ಪೂಜಾರಿ ಎನ್ನುವವರು ಕೂಡಾ ಸಾಕ್ಷಿದಾರರಾಗಿ ಸಹಿ ಮಾಡಿದ್ದು, ಅವರ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ನಮ್ಮ ಇಬ್ಬರ ಸಮಕ್ಷಮ ಲಕ್ಷ್ಮೀ ನಾರಾಯಣ ಭಟ್ ರವರು ಕೂಡ ಸಹಿ ಮಾಡಿದ್ದು, ಅವರ ಸಹಿಯನ್ನು ನಾನು ನೋಡಿ ಗುರುತಿಸುತ್ತೇನೆ. ಸದ್ರಿ ಅವರ 4 ಸಹಿಗಳನ್ನು ನಿಪಿ-8(ಸಿ) ರಿಂದ 8(ಎಫ್) ಎಂದು ಗುರುತಿಸಲಾಯಿತು. ಈ ವಿಲ್ ನಾಮೆ ತಯಾರಿಸುವಾಗ ನಾನು ಬರಹಗಾರರಾದ ವಾಸುದೇವ್ ರವರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೆ.

**ಈ ದಾವೆಯಲ್ಲಿ ಏಕಪಕ್ಷಿಯವಾಗಿರುವ ಕಾರಣ ಪಿಡಬ್ಲ್ಯೂ -2 ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೋಳ್ಳಲಾಯಿತು.**

**ಮಾರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಒ.ಎಸ್.- 64/2025
ಪಿ.ಡಬ್ಲ್ಯು- 02

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.